**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ**

**ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 790/2019** **CW-1**

**ಸಾಕ್ಷಿಯನ್ನು ದಿಃ 28.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಶಿವರಾಂ |
| ತಂದೆಯ ಹೆಸರುಃ | ಚಲುವೇಗೌಡ |
| ವಯಸ್ಸುಃ | 63 ವರ್ಷ |
| ವೃತ್ತಿಃ | ವ್ಯವಸಾಯ |
| ವಾಸ ಸ್ಥಳಃ | ಚನ್ನರಾಯಪಟ್ಟಣ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-2 ನನ್ನ ಹೆಂಡತಿ. ಚಾಸಾ-3 ನನ್ನ ಮಗ. ಚಾಸಾ-4 ರಿಂದ ಚಾಸಾ-9 ರವರ ಪರಿಚಯವಿದೆ. ಆರೋಪಿತರು ಗೊತ್ತು.

ದಿಃ 08.06.2019 ರಂದು ಮದ್ಯಾಹ್ನ 1.45 ರ ಸಮಯದಲ್ಲಿ ಆರೋಪಿತರು ಮತ್ತು ಅವರ ಮಕ್ಕಳಾದ ದಿವ್ಯ ಮತ್ತು ನವ್ಯ ರವರು ನನ್ನ ಹೆಂಡತಿ ಚಾಸಾ-2 ರವರನ್ನು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದು, ನಾನು ಪ್ರಶ್ನಿಸಿದಾಗ 1 ಮತ್ತು 2ನೇ ಆರೋಪಿ ಕಲ್ಲಿನಿಂದ ನನ್ನ ಎಡಬುಜ ಮತ್ತು ಬಲಕಾಲಿನ ಮಂಡಿಗೆ ಹೊಡೆದಿರುತ್ತಾರೆ, 2ನೇ ಆರೋಪಿ ಕಲ್ಲಿನಿಂದ ಚಾಸಾ-3 ರವರಿಗೆ ಹೊಡೆದಿರುತ್ತಾರೆ. ದಿವ್ಯ ಒಂದು ರಿಪೀಸ್ ಪಟ್ಟಿಯಿಂದ ನನಗೆ ಮತ್ತು ಚಾಸಾ-3 ರವರ ಬೆನ್ನಿಗೆ ಹೊಡೆದಿರತ್ತಾರೆ. ನಂತರ ಅಲ್ಲಿಯೇ ಇದ್ದ ಚಾಸಾ-4, ಚಾಸಾ-6 ಮತ್ತು ಚಾಸಾಸ-7 ರವರು ಜಗಳ ಬಿಡಿಸಿ ನನ್ನನ್ನು ಮತ್ತು ಚಾಸಾ-3 ರವರನ್ನು ಚನ್ನರಾಯಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ನನ್ನಿಂದ ಹೇಳಿಕೆ ದೂರನ್ನು ಪಡೆದಿರುತ್ತಾರೆ. ಈಗ

ಸಾಕ್ಷಿಗೆ ಹೇಳಿಕೆ ದೂರನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಾನು ಕಲ್ಲು ಮತ್ತು ರಿಪೀಸ್ ಪಟ್ಟಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಕಲ್ಲು ಮತ್ತು ರಿಪೀಸ್ ನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು ಮಾ 1 ಮತ್ತು 2 ಎಂದು ಗುರುತಿಸಲಾಯಿತು. ಪೋಲೀಸರಿಗೆ ನಾನು ಯಾವುದೇ ಮರು ಹೇಳಿಕೆ ನೀಡಿಲ್ಲ. ಸಾಕ್ಷ್ಷಿ ನ್ಯಾಯಾಲೀಯದಲ್ಲಿರುವ 1 ಮತ್ತು 2ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

2ನೇ ಆರೋಪಿ ರಿಪೀಸ್ ಪಟ್ಟಿಯಿಂದ ಚಾಸಾ-3 ರವರ ಎಡ ಕೈ ತೋರು ಬೆರಳಿಗೆ ಹೊಡೆದಿರುರತ್ತಾರೆ ಎಂದರ ಸರಿ. ಅವರನ್ನು ಹೊಡೆದು ತಳ್ಳಿ ಬಲಕಾಲಿನ ಹೆಬ್ಬೆರಳಿಗೆ ಪೆಟ್ಟು ಮಾಡಿರುತ್ತಾರೆ ಎಂದರೆ ಸರಿ.

ನಾನು ಆರೋಪಿತರ ಮಕ್ಕಳು ನಮ್ಮನ್ನು ಹೊಡೆದಿರುತ್ತಾರೆ ಎಂದು ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ದಿಃ 08.06.2019 ರ ಮರು ಹೇಳಿಕೆ ಓದಿ ಹೇಳಲಾಗಿ ಹಲ್ಲಗಳೆದಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ ಜೆ ಡಿ ರವರಿಂದ ಃ**

ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಸಮಯ ಕೋರಿದ್ದು ಕಾಲಾವಕಾಶ ನೀಡಲಾಯಿತು.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**